

ಆಡಿಯೋ ಸಲಕರಣೆಗಳನ್ನು ನೀಡಲಾಗುತ್ತದೆ. ಈ ಧ್ವನಿಮುದ್ರಿಕೆಗಳು ಇಂಗ್ಲಿಷ್ ಮತ್ತು ಸ್ಪ್ಯಾನಿಷ್ ಭಾಷೆಗಳಲ್ಲಿದ್ದು, ಬೇಕಾದುದನ್ನು ಆರಿಸಿಕೊಳ್ಳಬಹುದು. ಚೀನಿ, ಫ್ರೆಂಚ್, ಜರ್ಮನ್, ಜಪಾನಿ ಭಾಷೆಗಳಲ್ಲಿ ಲಿಖಿತ ಪಠ್ಯವೂ ಲಭ್ಯ.

ಎರಡು ಮಹಡಿಗಳ ಕೆಳಭಾಗದಲ್ಲಿ ನಮ್ಮ ಲಾಲ್‌ಬಾಗ್‌ನ ಗಾಜಿನ ಮನೆಯನ್ನು ನೆನಪಿಸುವಂತಹ ಮನೆಯಲ್ಲಿ ಮುದ್ರಣಗೊಳ್ಳುವ ಪೇಪರ್ ಕರೆನ್ಸಿ ಮುದ್ರಣ ಪ್ರಕ್ರಿಯೆಯನ್ನು ವೀಕ್ಷಿಸಬಹುದು. ಕಾಲುದಾರಿಯಲ್ಲಿ ನಡೆಯುತ್ತಾ ಡಾಲರ್‌ಗಳು ರೂಪುಗೊಳ್ಳುವುದನ್ನು ನೋಡಬಹುದು. ಕಾಗದದ ಇತಿಹಾಸ, ಕರೆನ್ಸಿ ಮುದ್ರಣದ ಸಂಕೀರ್ಣತೆ ಮತ್ತು ಉತ್ಪಾದನಾ ಪ್ರಕ್ರಿಯೆಗಳ ಬಗ್ಗೆ ಮಾಹಿತಿ ದೊರೆಯುತ್ತದೆ. ಗಾಜಿನ ಮನೆಯಲ್ಲಿ ಕೆಲಸಗಾರರ ಚಟುವಟಿಕೆಗಳು, ಕರೆನ್ಸಿ ಮುದ್ರಣಕ್ಕೆ ಹಾಳೆ ಹಾಕುವುದು, ನೋಟು ಪ್ರಿಂಟ್ ಆಗಿ ಬರುವುದು, ಡಾಲರ್‌ಗಳನ್ನು ಎಣಿಸಿ ಎಣಿಸಿ ಬಂಡಲು ಮಾಡುವುದು ಇವೆಲ್ಲವನ್ನೂ ನೋಡುವುದೇ ಒಂದು ಅದ್ಭುತ ಅನುಭವ. ಕೆಲವರಂತೂ ಈ ದೃಶ್ಯಗಳನ್ನು ನೋಡುವಾಗ ಹರ್ಷೋದ್ಗಾರ ಮಾಡುವುದಿದೆ, ಲೋಕವನ್ನೇ ಮರೆತಂತೆ ನಿಂತಲ್ಲೇ ಅಲುಗಾಡದೆ ನಿಲ್ಲುವುದಿದೆ.

ಡಾಲರ್‌ಗಳ ಮುದ್ರಣಕ್ಕೆ ಬಳಸುವ ಕರೆನ್ಸಿ ಕಾಗದ ಹಾಗೂ ಶಾಯಿ ವಿಶಿಷ್ಟವಾಗಿರುತ್ತದೆ. ‘ಬ್ಯೂರೋ ಆಫ್ ಎನ್‌ಗ್ರೇವಿಂಗ್ ಮತ್ತು ಪ್ರಿಂಟಿಂಗ್’ಗಾಗಿಯೇ ವಿಶೇಷ ಕಾಗದ–ಶಾಯಿ ತಯಾರಿಸಲಾಗುತ್ತದೆ. ‘ಕ್ರೇನ್’ ಎನ್ನುವ ಊರಿನಿಂದ ಬರುವ, ಶೇ. 75ರಷ್ಟು ಕಾಟನ್ ಹಾಗೂ ಶೇ. 25ರಷ್ಟು ಲಿನೆನ್ ಮಿಶ್ರಣವಾಗಿ ಬರುವ ಕಾಗದವನ್ನು ಬಳಸಲಾಗುತ್ತದೆ. ನೋಟಿನಲ್ಲಿನ ಭದ್ರತಾ ಥ್ರೆಡ್, ಭಾವಚಿತ್ರ ಮತ್ತು ಕಾಗದದಲ್ಲಿನ ಅಸಂಖ್ಯಾತ ವಾಟರ್ ಮಾರ್ಕ್‌ಗಳನ್ನು ರೂಪಿಸುವುದು ಕೂಡ ಸಂಕೀರ್ಣ ಕಲೆ.

‘ಬ್ಯೂರೋ ಆಫ್ ಎನ್‌ಗ್ರೇವಿಂಗ್ ಮತ್ತು ಪ್ರಿಂಟಿಂಗ್’ ಕಾರ್ಯಾಚರಣೆ ಮೊದಲು ವಾಷಿಂಗ್ಟನ್ ಡಿ.ಸಿ. ನಗರಕ್ಕೆ ಮಾತ್ರ ಸೀಮಿತವಾಗಿತ್ತು. ಟೆಕ್ಸಾಸ್‌ನಲ್ಲಿ ಮುದ್ರಣ ಘಟಕ ಆರಂಭಗೊಂಡಿದ್ದು 1991ರಲ್ಲಿ. ಮುದ್ರಣಕ್ಷೇತ್ರದ ಅತ್ಯಾಧುನಿಕ ತಂತ್ರಜ್ಞಾನ ಎರಡೂ ಘಟಕಗಳಲ್ಲಿ ಬಳಕೆಯಾಗುತ್ತದೆ. ವಾಷಿಂಗ್ಟನ್‌ನಲ್ಲಿ ಮುದ್ರಣವಾಗುವ ನೋಟುಗಳ ಮೇಲೆ ಅಲ್ಲಿಯ ಚಿಹ್ನೆ ಇದ್ದರೆ, ಟೆಕ್ಸಾಸ್‌ನಲ್ಲಿ ಮುದ್ರಣವಾಗುವ ನೋಟುಗಳನ್ನು ಸೂಚಿಸುವುದಕ್ಕೆ ಅಲ್ಲಿಯದೇ ಆದ ಚಿಹ್ನೆ ಇರುತ್ತದೆ.

ಟೆಕ್ಸಾಸ್‌ನ ‘ಬ್ಯೂರೊ ಆಫ್ ಎನ್‌ಗ್ರೇವಿಂಗ್ ಮತ್ತು ಪ್ರಿಂಟಿಂಗ್’ ಸಂಸ್ಥೆಯಲ್ಲಿ ಸುಮಾರು 800 ಕೆಲಸಗಾರರು, ಮೂರು ಪಾಳಿಗಳಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಮುದ್ರಣಾಲಯಗಳಲ್ಲಿ ಸಾಮಾನ್ಯವಾಗಿ ಇರುವಂತಹ ಸದ್ದುಗದ್ದಲ ಅಲ್ಲಿರದಿರುವುದು ಕೂಡ ಆಶ್ಚರ್ಯವನ್ನುಂಟುಮಾಡುತ್ತದೆ.

ಮುದ್ರಣಾಲಯದಲ್ಲಿ ‘ಎನ್‌ಗ್ರೇವಿಂಗ್’ ತಂತ್ರಜ್ಞಾನದ ಬಗ್ಗೆ ತಿಳಿದುಕೊಂಡಿದ್ದು ಒಂದು ವಿಶೇಷ ಅನುಭವ. ಅನೇಕ ಬಿಂದುಗಳು, ರೇಖೆಗಳನ್ನು ಒಳಗೊಂಡು ರೂಪುಗೊಂಡ ವ್ಯಕ್ತಿಯ ಅಥವಾ ಭೂದೃಶ್ಯದ ಚಿತ್ರಣವೇ ಎನ್‌ಗ್ರೇವಿಂಗ್. ಈ ಎನ್‌ಗ್ರೇವಿಂಗ್‌ನಿಂದಾಗಿ ನೋಟಿನ ಮೇಲೆ ಉಬ್ಬು–ತಗ್ಗಿನ ರಚನೆಗಳು ಉಂಟಾಗುತ್ತವೆ. ಈ ಚಿತ್ರವನ್ನು ಒಳಗೊಂಡ ಲೋಹದ ಅಚ್ಚನ್ನು ನಿಗದಿತ ಒತ್ತಡ ಬಳಸಿ ಕಾಗದದ ಮೇಲೆ ಮೂಡಿಸುವ ಕಲೆಗಾರಿಕೆಯನ್ನು ನೋಡಿಯೇ ಅನುಭವಿಸಬೇಕು.

ಪ್ರತಿ ನಿತ್ಯವೂ ನಾವು ಹಣವನ್ನು ಖರ್ಚು ಮಾಡುತ್ತೇವೆ. ಆದರೆ, ಆ ಹಣ ರೂಪುಗೊಳ್ಳುವ ಪ್ರಕ್ರಿಯೆಯನ್ನು ಕಣ್ಣಾರೆ ಕಂಡವರು ಬಹಳ ಅಪರೂಪ. ಅಂಥ ಅವಕಾಶ ದೊರೆತದ್ದು ಜೀವನದ ಒಂದು ವಿಶೇಷ ಅನುಭವವೇ ಸರಿ. ಅದರಲ್ಲೂ ವಿಶ್ವದ ಬಹುಮಾನ್ಯ ಕರೆನ್ಸಿಯಾದ ಡಾಲರ್ ಮುದ್ರಣ ಪ್ರಕ್ರಿಯೆಯನ್ನು ನೋಡುವುದು ಮತ್ತೂ ವಿಶೇಷ ಅನುಭವವೇ ಸರಿ.

ಡಾಲರ್‌ಗಳ ಮುದ್ರಣ ನೋಡಿದರಷ್ಟೇ ಸಾಕೆ? ಡಾಲರ್‌ಗಳನ್ನು ಖರ್ಚು ಮಾಡಲಿಕ್ಕೂ ಅಲ್ಲಿ ಅವಕಾಶವಿದೆ. ನಮ್ಮ ತಿರುಗಾಟದ ಕೊನೆಯ ನಿಲ್ದಾಣ ಗಿಫ್ಟ್ ಅಂಗಡಿ! ಅಲ್ಲಿ ವೈವಿಧ್ಯಮಯ ಉಡುಗೊರೆಗಳು ಕೊಳ್ಳುವಿಕೆಯನ್ನು ಪ್ರಚೋದಿಸುವಂತಿವೆ. ಕತ್ತರಿಸಿದ ಕರೆನ್ಸಿ ಹಾಳೆಗಳು, ಸಂಗ್ರಾಹಕರ ವಿಶೇಷ ಆವೃತ್ತಿಗಳು (ಕಲೆಕ್ಟರ್ಸ್ ಎಡಿಷನ್ಸ್) ಸೇರಿದಂತೆ ಕುರುಕಲು ತಿಂಡಿ, ಚಾಕೊಲೇಟ್‌ಗಳು ಲಭ್ಯ. ಡಾಲರ್ ಮುದ್ರಣಾಲಯಕ್ಕೆ ಭೇಟಿ ನೀಡಿದ ನೆನಪಿಗಾಗಿ ಒಂದಷ್ಟು ವಸ್ತುಗಳನ್ನು ಕೊಂಡು, ಅಲ್ಲಿಂದ ಮರಳುವಾಗ ಕೋಟಿ ಕೋಟಿ ಮೊತ್ತದ ಡಾಲರ್‌ಗಳ ಬಂಡಲ್‌ಗಳನ್ನು ಒಮ್ಮೆಗೇ ಕಂಡ ಅನುಭವ ಜೀವನದುದ್ದಕ್ಕೂ ಉಳಿಯುವ ನೆನಪಾಗಿ ಪರಿಣಮಿಸುತ್ತದೆ.

(ಬರಹದ ಜೊತೆಗೆ ಬಳಸಿರುವುದು ಸಾಂದರ್ಭಿಕ ಚಿತ್ರಗಳು)

ಮುದ್ರಣ ಕಾರ್ಯವೈಖರಿ ವೀಕ್ಷಿಸಲು ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/2J5e5dT